• ಪರಿಸರ ಸಂರಕ್ಷಣಾ ಕೇಂದ್ರ •
ಹುಲೇಮಳಗಿ ಕಟ್ಟಡ, ಶಿರಸಿ -೫೮೧ ೪೦೧

೨೪/೭/೮೪

Principal Chief Conservator of Forests,
Bangalore.

ಮಾನ್ಯರೇ,

ಶಿರಸಿ ಅರಣ್ಯ ವಿಭಾಗದಲ್ಲಿ ಬಿ.೭ (ಬಿಳಿ ಜನಲ 1ನೇ ಸ್ಥ) ಪ್ರಕರಣ ರದ್ದಾಗಿರುವುದರಿಂದ ಜನರ ಮನೆ ಬಳಕೆಗೆ ಕಟ್ಟಿಗೆ ಸಿಗದೆ ಪರದಾಡಬೇಕಾದ ಸ್ಥಿತಿ ಒದಗಿ ಬಂದಿದೆ. ಮಳೆಗಾಲ ಪ್ರಾರಂಭಿಸುತ್ತಿದ್ದು ಜನರು ತಮ್ಮ ಗುಡಿಸಲನ್ನು ಸರಿ ಕಟ್ಟಿಕೊಳ್ಳಲು ತೊಂದರೆ ಪಡಬೇಕಾಗಿದೆ. ಕೂಡಲೇ ಆಗಿ ಜನರ ತೊಂದರೆಯನ್ನು ನಿವಾರಿಸಲು ತಾವು ಜನರ ಬಳಕೆಗಾಗಿ ಸಲುವಾಗಿ ಕೆಲವು ರಿಯಾಯ್ತಿ ದರದಲ್ಲಿ ಡಿಪೋದಿಂದ ಕಟ್ಟಿಗೆ ಕೊಡಲು, ಮನೆ ರಿಪೇರಿಯ ಅವಶ್ಯಕತೆಗಳನ್ನು ಪೂರೈಸಲು ಆದೇಶ ನೀಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಅಲ್ಲದೆ ಕಾಮಗಾರಿ ಕೆಲವು ಬಡವರ ಸ್ಥಳಗಳಲ್ಲಿ ನಡೆಯುವ ಕಾಮಗಾರಿಯು ನಿಂತುಹೋಗಿದ್ದು, ಇದರಲ್ಲಿ ಅರಣ್ಯ ನೀಗಳ ನಡೆಯುವಂತೆ, ಕೂಲಿ ಬೇಕಾದ ಪರಿಗಳನ್ನು ಕೊಡುವಂತೆ ಆದೇಶ ನೀಡಬೇಕಾಗಿ ಕೇಳಿಕೊಳ್ಳುತ್ತೇವೆ.

ಇತಿ
ತಮ್ಮ ವಿಶ್ವಾಸಿ,
ಪಾಂಡುರಂಗ ಹೆಗಡೆ.

ಶಿರಸಿ:
೨೪/೭/೮೪.

PARISARA SANMRAKSHANA KENDRA
Hulemalgi Bldg., SIRSI-581 401 Phone : 209

ನಂ.ಬಿ2:ಬೆಟ್ಟ ಲ್ಯಾಂಡ್:ಸಿಆರ್–134:84:85

ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ
ಉತ್ತರ ಕನ್ನಡ ವೃತ್ತ,
ಧಾರವಾಡ:580008:ದಿನಾಂಕ: 11–1–1985.

ಗೆ
ಪರಿಸರ ಸಂರಕ್ಷಣಾ ಕೇಂದ್ರ
ಸಿರಸಿ.

ಮಹನೀಯರೇ,

ವಿಷಯ:– ಬೆಟ್ಟದ ರಕ್ಷಣೆಯ ಬಗ್ಗೆ.

– – – –

ನೀವು ಪ್ರಕಟಪಡಿಸಿದ ಬೆಟ್ಟದ ರಕ್ಷಣೆ ಹೇಗೆ ಮನವಿ ಪತ್ರವನ್ನು ಪರಿಶೀಲಿಸಿ ನೋಡಲಾಗಿ ಈ ಕೆಳಗಿನ ಅಂಶಗಳನ್ನು ಅದರ ಜೊತೆಗೆ ಕೂಡಿಸಿ ಜನರ ಮನವರಿಕೆಯಾಗುವಂತೆ ತಿಳುವಳಿಕೆ ಮಾಡಿಕೊಟ್ಟಲ್ಲಿ ಬೆಟ್ಟದಲ್ಲಿಯ ಅರಣ್ಯವನ್ನು ರಕ್ಷಿಸಲು ತುಂಬಾ ಅನುಕೂಲ ವಾಗುತ್ತದೆಂದು ನಾನು ಭಾವಿಸುತ್ತೇನೆ.

1) ಈಗಾಗಲೇ ವಿಜ್ಞಾನಿಗಳು ಎಷ್ಟೋ ತರಹದ ಆಧುನಿಕ ಪದ್ಧತಿಯಲ್ಲಿ ರಸಗೊಬ್ಬರ ವನ್ನು ಉಪಯೋಗಿಸುವದರಿಂದ ಬರಬೇಕಾದ ಅಂದಾಜು ಪಸಲಿಗಿಂತ ಹೆಚ್ಚಿಗೆ ಉತ್ಪನ್ನ ಬರುವದೆಂದು ಪ್ರಾಯೋಗಿಕವಾಗಿ ಪರೀಕ್ಷೆ ಮಾಡಿ ನಿರ್ಣಯಿಸಿದ್ದಾರೆ ಆದುದರಿಂದ ಬೆಟ್ಟದ ಸವಲತ್ತನ್ನು ಉಪಯೋಗಿಸುವ ಅಡಿಕೆ ತೋಟದಾರರು ಆಧುನಿಕ ರಸಗೊಬ್ಬರವನ್ನು ~~ಬೆಳಸಿದಲ್ಲಿ~~ ಉಪಯೋಗಿಸಿದಲ್ಲಿ ಬೆಟ್ಟಗಳನ್ನು ನಾಶ ಮಾಡುವದನ್ನು ತಡೆಗಟ್ಟಬಹುದು.

2) ಬೆಟ್ಟದಲ್ಲಿ ಬೆಳೆದ ಗಿಡಗಳಿಂದ ಪ್ರತಿವರ್ಷ ಬಿದ್ದ ಒಣ ಎಲೆಗಳನ್ನು ಕೂಡಿಸಿ ಗೊಬ್ಬರ ವೆಂದು ಉಪಯೋಗಿಸಿದಲ್ಲಿ ಬೆಟ್ಟದಲ್ಲಿ ಇದ್ದ ಗಿಡಗಳ ಟೊಂಗೆಗಳನ್ನು ಕಡಿದು ನಾಶಮಾಡುವದು ತಪ್ಪಿಸಿದಂತಾಗುವದು.

3) ಪ್ರತಿ ವರ್ಷ ಪ್ರತಿಯೊಬ್ಬ ತೋಟಗಾರನು ಅವನ ತೋಟಕ್ಕೆ ಸಂಬಂಧಿಸಿದ ಬೆಟ್ಟದಲ್ಲಿ ಕನಿಷ್ಟ ಪಕ್ಷ ಎಕರೆಗೆ 20 ಗಿಡಗಳಂತೆ ಹೆಚ್ಚು ಸಾಕಿ ಬೆಳೆಸಬೇಕೆಂದು ತಿಳುವಳಿಕೆ ಯನ್ನು ಮಾಡಿಸುವದು ಯೋಗ್ಯವೆಂದು ಕಂಡುಬರುತ್ತದೆ.

ತಮ್ಮ ವಿಶ್ವಾಸಿಕ

ಅರಣ್ಯ ಸಂರಕ್ಷಣಾಧಿಕಾರಿಗಳು
ಉತ್ತರ ಕನ್ನಡ ವೃತ್ತ, ಧಾರವಾಡ.

ಆರ್.